# ಅಧ್ಯಾಯ 19

ಓಂ ಗಣೇಶಾಯ ನಮಃ     ಸದ್ಗುರು ಸಿದ್ಧಾರೂಢ ನಮಃ



| ಛಂದ | ಮುಂದೆ ಲೋಕಕ್ಕೆ  ಬರುವ ದುಃಖವನರಿದು ಪಾಲಿಸು ಭಕ್ತರಾಗಿ
ಬಂದ ಸಂಕಟದಿಂದ ಪೊರೆದೀ ದಯದಿ ದೀನ ಅನಾಥರಾ| ಗ್ರಂಥಿ
ರೋಗದಿ ದೃಷ್ಟಿ ಹೋದ ಸುಭಕ್ತ ನಿನ್ನಯ ಪಾದವಾ| ಚಿಂತೆಯಿಂದಲಿ
ಪಿಡಿದು ಸುಖಿಯಾದನು ಅನಾಥರ ಬಾಂಧವಾಗಿ

ಶ್ರೀ ಸದ್ಗುರು ಸಿದ್ಧಸ್ವಾಮಿಯೇ, ನೀನು ಸಕಲರ ಅಂತರ್ಯಾಮಿ ಇರುವಿ. ಎಲ್ಲಾ ದೇವರುಗಳ ಹೆಸರುಗಳಿಂದ ನೀನೇ ಇದ್ದು ಯಾವಾಗಲೂ ಲೀಲೆಯನ್ನು ತೋರಿಸುತ್ತಿರುವಿ. ನಿನ್ನ ಕೃಪಾಲೇಶದಿಂದ ಭವಭ್ರಮವು ತತ್ಕಾಲ ಹಾರಿಹೋಗುವದು, ಮತ್ತು ಸತ್ಯವಾದ ಜ್ಞಾನವು ಅಂತರ್ಯದೊಳಗೆ ಪ್ರಕಾಶವಾಗಿ, ಭಕ್ತ ಜನರು ಉದ್ಧಾರವಾಗುವರು. ಲೋಕದಲ್ಲಿ ಯಾರು ಅಜ್ಞ ಜನರಿರುವರೋ ಅವರ ಹೃದಯದಲ್ಲಿರುವ ವಿಪರೀತ ಜ್ಞಾನವು ನಿನ್ನ ಕೃಪೆಯಿಂದ ಶೀಘ್ರವಾಗಿ ನಿರಸನವಾಗುವದು. ಅನಂತ ಜನ್ಮಗಳ ಪುಣ್ಯಕೋಟಿ ಇರುವದರಿಂದಲೇ ನಿನ್ನ ಭೆಟ್ಟಿಯಾಗುವದು. ನಿನಗೆ ಶರಣು ಬಂದವರನ್ನು ನೀನು ಕೃಪಾದೃಷ್ಟಿಯಿಂದ ಈಕ್ಷಣೆ ಮಾಡಿದ ಮಾತ್ರದಿಂದ ತತ್ಕ್ಷಣವೇ ಅವರನ್ನು ತಾರಿಸುವಿ. ಶಾಸ್ತ್ರಗಳಲ್ಲಿ ಅನೇಕ ತಾರಣೋಪಾಯವನ್ನು ಹೇಳಿರುತ್ತವೆ. ಆದರೆ ಅವುಗಳ ವಾಚನ ಮಾತ್ರದಿಂದ ಯಾರಿಗೂ ಯುಕ್ತಿ ದೊರೆಯದು. ಅದರ ಅಂತರ್ಭಾವವನ್ನು ನೀನೊಬ್ಬನೇ ತಿಳಿದಿರುವಿ. ಕರ್ಮವು

ಪ್ರಾಣಿಗಳಿಗೆ ಸ್ವಾಭಾವಿಕವಾಗಿರುವುದು. ಅವರಿಗೆ ಕರ್ಮವನ್ನು ಯಾತಕ್ಕೆ ಹೇಳಬೇಕು, ಎಂದು ನೀನೊಬ್ಬನೇ ನಿವೃತ್ತಿ ಮಾರ್ಗವನ್ನು ಬೋಧಿಸುತ್ತಿರುವಿ. ಇತರರೆಲ್ಲಾ ಬಹಿರ್ಮುಖಿಗಳಿರುವವರು. ನಿನ್ನ ಸೇವಾ ರೂಪವಾದ ನಿಷ್ಕಾಮ ಕರ್ಮ ಮಾಡುವುದರಿಂದ, ಅಹಂ ಮಮಕಾರಗಳು ನಿರಸನವಾಗುವವು. ಮತ್ತು ಹೃದಯದಲ್ಲಿ ಭಕ್ತಿ ಮತ್ತು ಪ್ರೇಮ ಉಕ್ಕಿ ಬಂದು, ಆ ಸ್ಥಾನದಲ್ಲಿ ಸದ್ಗುರುವಿನ ರೂಪ ಮತ್ತು ನಾಮವು ನೆಲೆಗೊಳ್ಳುವವು. ಆಗ ವಿಷಯ ಸಂಕಲ್ಪಗಳನ್ನು ಸುಡುತ್ತಾ, ವೈರಾಗ್ಯ ಜ್ವಾಲೆಗಳೇರುವವು, ಮತ್ತು ವಿವೇಕವು ವಾಸನಾರೂಪ ಮಲವನ್ನು ತೊಳೆದು, ನಿರ್ವಿಕಾರವಾದ ಸ್ವರೂಪವನ್ನು ತೋರಿಸುವದು, ಸ್ವರೂಪ ಸಾಕ್ಷಾತ್ಕಾರವಾಗುವದಕ್ಕೆ ಸದ್ಗುರು ಬೋಧವೇ ಕಾರಣವಾಗಿರುವದು. ಸದ್ಗುರು ಕೃಪೆ ಆಗದ ವಿನಃ ಎಲ್ಲಾ ಸಾಧನಗಳು ವ್ಯರ್ಥವಾಗಿರುವವು. ಅಂಥಾ ಸದ್ಗುರುವಿಗೆ ಶರಣು ಹೋದ ಕೂಡಲೇ ಪೂರ್ಣ ದಯಾವಂತನಾದ ಆತನು ಸ್ವೀಕಾರ ಮಾಡುತ್ತಾನೆ, ಮತ್ತು ಆತನ ಬಲದಿಂದ ಮೃತ್ಯುವಿನ

ಮಸ್ತಕದ  ಮೇಲೆ ಕಾಲು ಕೊಟ್ಟು ತಾರಣ ಹೊಂದುತ್ತಾರೆ. ಇರಲಿ, ಹೇ ಶ್ರೋತಾ ಜನರುಗಳಿರಾ, ಸಿದ್ಧ ಸದ್ಗುರುಗಳ ಪುಣ್ಯಕಥೆಯನ್ನು ಕೇಳುವಂಥವರಾರಿ. ಒಮ್ಮೆ ಸದ್ಗುರುಗಳು ಸಿದ್ಧಾಶ್ರಮದಲ್ಲಿರುತ್ತಿರುವಾಗ ಏನು ಚರಿತ್ರವಾಯಿತು, ಅದನ್ನು ಶ್ರವಣ ಮಾಡಿರಿ. ಬೆನಕಪ್ಪನೆಂಬ ಒಬ್ಬ ಭಕ್ತನು ಮಠದ ಗೋಡೆಯ ಮೇಲೆ ಚಿತ್ರಗಳನ್ನು ತೆಗಿಯುತ್ತಿರುವಾಗ, ಒಬ್ಬ ಮಿತ್ರನ ಕೂಡ ಹೀಗನ್ನುವಂಥವನಾದನು - “ಮುಂದಿನ ಶಿವರಾತ್ರಿಯ ಉತ್ಸವ ಸಮಯದಲ್ಲಿ, ನಾನು ಒಂದು ಅಪೂರ್ವವಾದ ಚಿತ್ರವನ್ನು ತೆಗೆಯುವೆನು. ಆ ಚಿತ್ರವನ್ನು ನೋಡಿ ಎಲ್ಲಾ ಜನರು ಕೌತುಕಪಟ್ಟು ಚಕಿತರಾಗುವರು".  ಈ ಪ್ರಕಾರ ಬೆನಕಪ್ಪನು ಅನ್ನುತ್ತಿರುವಾಗ ಅವನಿಗೆ ತಿಳಿಯದೆ, ಸಿದ್ಧರು ಅವರ ಹಿಂದೆ ನಿಂತಿದ್ದರು. ಆಗ ಅವರ ಮುಂದೆ ಬಂದು ಹೀಗನ್ನುತ್ತಾರಲ್ಲ - "ನೀನು ಚಿತ್ರ ಮಾಡುವೆನೆಂದು ಹೇಳುತ್ತಿ, ಆದರೆ ಮುಂದಿನ ವರ್ಷ ಈಶ್ವರನು ತೆಗೆಯುವ ಚಿತ್ರವು ನಿಶ್ಚಯವಾಗಿ ಎಲ್ಲಕ್ಕೂ ವಿಲಕ್ಷಣವಾಗುವದು. ಅದೇನೆಂದರೆ ನಗರವೇ ಅಡವಿಯಾಗುವದು. ಅರಣ್ಯಕ್ಕೆ ಎಲ್ಲಾ ಜನರು

ಹೋಗುವವರು ಮತ್ತು ಪಟ್ಟಣದಲ್ಲಿ ಕಾಡು ಪಶುಗಳು ಬಂದು ವಸ್ತಿ ಮಾಡಿಕೊಂಡಿರುವವು. ರಸ್ತೆಗಳು ಭಯಂಕರವಾಗಿ ಕಾಣಿಸುವವು. ಪ್ರೇತಗಳು ಬೀದಿಗಳಲ್ಲಿ ಬಿದ್ದಿರುವವು, ಮತ್ತು ಗೃಧ್ರಾದಿ ಪಕ್ಷಿಗಳು ಅವುಗಳ ಮೇಲೆ ಕುಳಿತು ಸುಖದಿಂದ ಭೋಜನ ಮಾಡುತ್ತಿರುವವು". ಹೀಗಂದು ಸಿದ್ದರು ಸುಮ್ಮನಾದರು. ಈ ವಚನವನ್ನು ಕೇಳಿ ಅವರಿಬ್ಬರು ಘಾಬರಿಯಾದರು. ಎಷ್ಟು ವಿಚಾರ ಮಾಡಿದರೂ, ಆ ಮಾತುಗಳು ಅರ್ಥವೇನೆಂದು ಅವರಿಗೆ ತಿಳಿಯದೇ ಹೋಯಿತು. ಇದಾದ ಆರು ತಿಂಗಳ ನಂತರ, ಮುಂಬೈ ಶಹರದೊಳಗೆ ಗ್ರಂಥಿರೋಗವು ವ್ಯಾಪಿಸಿತು. ಕೆಲವು ಕಾಲ ಮೇಲೆ ಆ ರೋಗವು ಹುಬ್ಬಳ್ಳಿಗೂ ಬರುವಂಥದ್ದಾಯಿತು. ಬಹಳ ಜನರು ಸಾಯಲಾರಂಭಿಸಿದರು. ಮರಣ ಭೀತಿ ಎಲ್ಲರನ್ನೂ ವ್ಯಾಪಿಸಿಕೊಂಡು, ಜನರೆಲ್ಲಾ ತಮ್ಮ ತಮ್ಮ ಗೃಹಗಳನ್ನು ಬಿಟ್ಟು, ಅರಣ್ಯಕ್ಕೆ ಹೋಗುವಂಥವರಾದರು. ಯಾವದೊಂದು ಗೃಹದೊಳಗೆ ವ್ಯಾಧಿ ಬಂತೆಂದರೆ ಮನೆಯೊಳಗಿನ ಜನರನ್ನೆಲ್ಲಾ ಹೊರಗೆ ಓಡಿಸುತ್ತಿದ್ದರು. ಅವರು ಅಡವಿಯೊಳಗೆ

ಗುಡಿಸಲುಗಳನ್ನು ಕಟ್ಟಿಕೊಂಡು ಇರುತ್ತಿದ್ದರು. ರೋಗ ಆದವರ ರಕ್ಷಣೆ ಮಾಡಲಿಕ್ಕೆ ಯಾರೂ ಇಲ್ಲದ, ರಸ್ತೆ ಮೇಲೆ ಬಿದ್ದು ಸಾಯುತ್ತಿದ್ದರೂ. ಆ ಹೆಣಗಳನ್ನು ತೆಗೆಯುವವರು ಇಲ್ಲದೆ, ಗೃಧ್ರಾದಿ ಪಕ್ಷಿಗಳು ಅಲ್ಲಿ ವಾಸ ಮಾಡುತ್ತಿದ್ದವು. ಹೇಗೆ ಸಿದ್ದರ ಭವಿಷ್ಯ ಕಥನವು, ಪೂರ್ಣ ಸತ್ಯವಾಯಿತು. ಮುಂದೆ ಸದ್ಗುರುಗಳ ಮಹಿಮಾನವನ್ನು ಸಾವಧಾನ ಚಿತ್ತದಿಂದ ಶ್ರವಣ ಮಾಡುವಂಥವರಾಗಿರಿ, ಬೆನಕಪ್ಪನಿಗೆ ಗ್ರಂಥಿರೋಗವು ಹತ್ತಿತು. ಆಗ ಸರಕಾರಿ ನೌಕರನು ಮನೆಗೆ ಬಂದು, ವ್ಯಾಧಿಯ ವರ್ತಮಾನವನ್ನು ತಿಳಿದುಕೊಂಡು, ಉಚ್ಚಾಧಿಕಾರಿಗೆ ತಿಳಿಸಲಿಕ್ಕೆ ಹೋದನು. ಅಧಿಕಾರಿಗಳು ರೋಗಿಯ ಮನೆಗೆ ಬಂದು, ರೋಗಿಯನ್ನು ನೋಡಿ ಊರ ಹೊರಗೆ ಕಳುಹಿಸುವರು. ಊರ ಹೊರಗೆ ಹೋದರೆ ಅಲ್ಲಿ ನಿಶ್ಚಯವಾಗಿ ಸಾಯುತ್ತಿದ್ದರೂ. ಬೆನಕಪ್ಪನ ಹೆಂಡತಿಯು ಬಹಳ ಗಾಬರಿಯಾಗಿ, ಸಿದ್ಧಾರೂಢರಿಗೆ ಶರಣು ಬಂದು ಅನ್ನುತ್ತಾಳೆ- 'ಹೇ ದಯಾಘನನೇ, ನಾವು ದೀನರಾಗಿ ನಿಮಗೆ ಶರಣು ಬಂದಿದ್ದೇವೆ, ನಮ್ಮನ್ನು ರಕ್ಷಿಸು." ಸಿದ್ಧರು ಎಲ್ಲಾ

ವರ್ತಮಾನವನ್ನು ಕೇಳಿಕೊಂಡು, ಅಂದದ್ದೇನೆಂದರೆ - "ನೀವಿಬ್ಬರೂ ನಾಮಸ್ಮರಣೆಯನ್ನು ಮಾಡಿರಿ. ಏನೇನೂ ಹೆದರಬೇಡಿರಿ. ನಿಮ್ಮನ್ನು ಯಾರೂ ಊರ ಹೊರಗೆ ಕಳುಹಿಸುವದಿಲ್ಲ", ಕೆಲವು ದಿವಸಗಳಾದ ಮೇಲೆ ಬೆನಕಪ್ಪನು ನೆಟ್ಟಗಾದನು. ಅಲ್ಲಿಯವರೆಗೆ ಅವರ ಮನೆಗೆ ಯಾರೊಬ್ಬರೂ ಅಧಿಕಾರಿ ಬಂದಿಲ್ಲ, ಅವರನ್ನು ಊರ ಹೊರಗೆ ಕಳುಹಿಸಲೇ ಇಲ್ಲ. ಅನಂತರ ಆತನ ಪತ್ನಿಗೆ ಅದೇ ರೋಗ ಬಂತು. ಆಗದ ಸರ್ಕಾರಿ ನೌಕರನು ಮನೆಗೆ ಬಂದನು. ಆತನು ನೋಡುವಾಗ ಎದುರಿಗೆ ರೋಗ ಬಂದ ಸ್ತ್ರೀಯು ಮಲಗಿಕೊಂಡಿದ್ದಳು. ಆದರೆ ಆಕೆಯು ಅವನ ಕಣ್ಣಿಗೆ ಕಾಣಿಸದೆ ಹೋದಳು. ಆತನು ಮನೆಯೊಳಗೆ ರೋಗಿ ಇಲ್ಲವೆಂದು ಬರೆದುಕೊಂಡು ಹೋದನು. ಭಕ್ತ ರಕ್ಷಣೆಯಲ್ಲಿ ತತ್ಪರನಾದ ಸದ್ಗುರುರಾಯನ ಕಾರ್ಯಗಳು ಹೀಗಿರುತ್ತವೆ. ಆಮೇಲೆ ಸದ್ಗುರುವಿನ ಪ್ರಸಾದ ವಿಭೂತಿಯನ್ನು ಬೆನಕಪ್ಪನ ಪತ್ನಿಗೆ ಹಚ್ಚಿದ ಮಾತ್ರದಿಂದಲೆ, ಆಕೆಗೆ ಪೂರ್ಣ ನೆಟ್ಟಗಾಯಿತು. ಈ ಪ್ರಕಾರ ಈ ಸಿದ್ಧ ಸದ್ಗುರುರಾಯನು ಭಕ್ತರನ್ನು ದಯೆಯಿಂದ ಪಾಲಿಸುತ್ತಿರುವನು. ಇರಲಿ, ಹಳೆ

ಹುಬ್ಬ ಳ್ಳಿಯಲ್ಲಿ ಜೀವಪ್ಪ ನೆಂಬ ಒಬ್ಬ ನೇಕಾರನಿರುತ್ತಿದ್ದನು. ಆತನು ದರಿದ್ರಾವಸ್ಥೆಯಲ್ಲಿದ್ದನು. ತನ್ನ ಸ್ತ್ರೀ ಪುತ್ರರನ್ನು ಕೂಡಿಕೊಂಡು ನಿತ್ಯದಲ್ಲಿಯೂ ಸಿದ್ಧಾರೂಢರಲ್ಲಿಗೆ ಬಂದು, ಅಲ್ಲಿ ಪ್ರೇಮದಿಂದ ಭಜನೆ ಮಾಡಿ, ಅನಂತರ ಆರತಿ ಬೆಳಗಿ, ನಮಸ್ಕಾರಾದಿಗಳನ್ನು ಮಾಡಿ, ತಮ್ಮ ಮನೆಗೆ ಬರುತ್ತಿದ್ದನು. ಹೀಗಿರುತ್ತಾ ಊರೊಳಗೆ ಗ್ರಂಥಿರೋಗವು ಬಂದು, ಜೀವಪ್ಪನಿಗೂ ಹತ್ತಿತು. ಆಗ್ಗೆ ಸ್ತ್ರೀಯು ಗಾಬರಿಯಾಗಿ ತನ್ನ ಮಕ್ಕಳನ್ನು ಕರಕೊಂಡು ಸಿದ್ಧಾರೂಢರ ಪಾದಕ್ಕೆ ಬಂದಳು. ಸದ್ಗುರುವಿಗೆ ನಮನ ಮಾಡಿ ಅನ್ನುತ್ತಾಳೆ -" ಹೇ ದೀನನಾಥನೇ, ನಿನಗೆ ಶರಣು ಬಂದಿರುವೆನು. ಯಜಮಾನರಿಗೆ ರೋಗ ಬಂದು ಮಲಗಿರುವಾಗ್ಗೆ ನಮಗೀಗ ಯಾರು ರಕ್ಷಿಸುವವರು ? ನಿನ್ನ ಹೊರತು ಅನ್ಯ ರಕ್ಷಕರಿಲ್ಲವೆಂದು ನಾನು ನಿರ್ಧಾರವಾಗಿ ತಿಳಿದಿರುವೆನು. ನೀನು ನಮ್ಮ ಮೇಲೆ ಕೃಪೆ ಮಾಡಿ ನನ್ನ ಪತಿಯನ್ನು ಬದುಕಿಸತಕ್ಕದ್ದಾಗಿರುತ್ತದೆ". ಆಕೆಯ ಈ ದೀನವಾಣಿಯನ್ನು ಕೇಳಿ ಸಿದ್ಧರು ಆಕೆಯ ಮತ್ತು ಮಕ್ಕಳ ಮೇಲೆ ಕೃಪೆಯಿಂದ

ವಿಭೂತಿಯನ್ನು ಕೊಟ್ಟು ನಾಮಸ್ಮರಣೆ ಮಾಡುತ್ತಿರಬೇಕೆಂದು ಹೇಳಿದರು. ಮಹಾತ್ಮರ ಕೃಪೆಯಿಂದ ಜೀವಪ್ಪನು ಪೂರ್ಣ ನೆಟ್ಟಗಾದನು, ಆದರೆ ರೋಗದ ಭರದಿಂದ ಆತನ ಎರಡೂ ಕಣ್ಣುಗಳು ಕುರುಡಾದವು. ಆಗ ಆ ದಂಪತಿಗಳು ಬಹಳ ತಳಮಳಿಸುವಂಥವರಾದರು. ಯಾಕೆಂದರೆ ಅವರು ಜೀವಿಕಾವೃತ್ತಿಯು ನಡಿಯದಂತಾಯಿತು. ಆಗ್ಗೆ ಪತಿಯನ್ನು ಕರೆದುಕೊಂಡು ಸ್ತ್ರೀಯು ಪುನಹಾ ಸದ್ಗುರುಗಳ ಸನ್ನಿಧಿಯಲ್ಲಿ ಪ್ರಾಪ್ತಳಾಗಿ, ಬಹು ದೈನ್ಯ ಭಾವದಿಂದ ನಿವೇದಿಸುತ್ತಾಳೆ - "ನಾವು ಸಮುದ್ರ ಜಲದೊಳಗಿಂದ ತಪ್ಪಿಸಿಕೊಂಡು ಬಾವಿಯೊಳಗೆ ಬಿದ್ದಂತಾಯಿತು. ಗ್ರಂಥಿಯೋಗದೊಳಗಿಂದ ಬದುಕಿ, ವೃತ್ತಿನಾಶ ಮೂಲಕ ಕ್ಷುಧೆಯ ಬಾಧೆಯಿಂದ ಮರಣ ಭಯವು ಪ್ರಾಪ್ತಿಯಾಗಿರುವದು. ಇಂಥಾ ಸಂಕಷ್ಟದೊಳಗಿಂದ, ದರಿದ್ರರಾದ ನಮ್ಮನ್ನು ಬಿಡಿಸುವವರನ್ನು ನಿನ್ನ ಹೊರತು ಮತ್ತ್ಯಾರನ್ನೂ ಸರ್ವಥಾ ಕಾಣೆವು. ಆದ್ದರಿಂದಲೇ ಪುನಹಾ ನಿನ್ನ ಪಾದಕ್ಕೆ ಶರಣು ಬಂದಿರುತ್ತೇವೆ' ಅಂದಳು. ಆಗ ದೀನದಯಾಳನಾದ ಸಿದ್ಧ ಸದ್ಗುರುರಾಜನು, ಭಕ್ತ ರಕ್ಷಕನು,

ಕರುಣಾಕರನು, ಶರಣಾಗತಿಗೆ ಕೃಪೆಯಿಂದ ಛಾಯಾ ಕೊಡುವಂತಹ ಮಹಾ ತರುವಿನಂತೆ ಇರುವವನಾಗಿ, ಏನು ಮಾಡಿದರೆಂದರೆ, ಆ ಜೀವಪ್ಪನನ್ನು ತನ್ನ ಸಮೀಪ ಕರೆದು, ಎರಡೂ ಕಣ್ಣುಗಳಿಗೆ ತನ್ನ ಅಮೃತ ಹಸ್ತಾ ಸ್ಪರ್ಶ ಮಾಡಿ, ಒಂದು ಅರಿವೆಯಿಂದ ಆತನ ಕಣ್ಣುಗಳನ್ನು ಕಟ್ಟಿ ಮನೆಗೆ ಹೋಗಿ ಬಿಚ್ಚೆರೆಂದನು. ಆಮೇಲೆ ಸದ್ಗುರುಗಳಿಗೆ ನಮಸ್ಕರಿಸಿ, ಆ ದಂಪತಿಗಳು ಮನೆಗೆ ಬಂದರು. ಗೃಹಕ್ಕೆ ಬಂದ ಕೂಡಲೇ, ಪತ್ನಿಯು ಪತಿಯ ಕಣ್ಣಿಗೆ ಕಟ್ಟಿದ ಅರಿವೆಯನ್ನು ಬಿಚ್ಚಿದಾಕ್ಷಣವೇ, ಬಹಳ ಆಶ್ಚರ್ಯವಾಯಿತು. ರೋಗ ಬರುವ ಮೊದಲು ಕಣ್ಣಿಗೆ ಹ್ಯಾಗೆ ಕಾಣಿಸುತ್ತಿತ್ತೊ ಹಾಗೆಯೇ ಜೀವಪ್ಪನಿಗೆ ಈಗ ಕಾಣಿಸುವುದು ನೋಡಿ, ಅವರಿಗೆ ಅತಿ ಆನಂದವಾಗುವಂಥಾದ್ದಾಯಿತು. ಮತ್ತು ಸದ್ಗುರುಸ್ತವನ ಮಾಡುವಂಥವರಾದರು. ಅನ್ನುತ್ತಾರೆ - ಹೇ ಸದ್ಗುರೋ ಈ ಹೊತ್ತಿನಿಂದ ನಮ್ಮ ಸಂಸಾರವನ್ನು ನಿನ್ನ ಚರಣಗಳಿಗೆ ಅರ್ಪಿಸಿರುತ್ತೇವೆ. ನಿನ್ನ ದಾಸರೇ ಆಗಿ ನಡಿಸುವೆವು. ಮತ್ತು ನಮ್ಮ ಮೇಲೆ ಏನೇನೂ ಭಾರ ಹಾಕಿಕೊಳ್ಳಲಾರೆವು "ದೀನ

ದಯಾಳುವಾದ ಸದ್ಗುರುನಾಥನು, ಸತ್ಯವಾಗಿ ಭಕ್ತರ ಸಂಕಷ್ಟಗಳನ್ನು ಪರಿಹರಿಸಿ, ಅವರನ್ನು ರಕ್ಷಿಸುತ್ತಾನೆ. ಅದರಿಂದ ಭಕ್ತಿಯು ವೃದ್ಧಿಯಾಗುತ್ತಿರುತ್ತದೆ. ಹೇ ಶ್ರೋತಾ ಜನರುಗಳಿರಾ, ಈ ಕಥೆಯ ಲಕ್ಷ್ಯಾರ್ಥವನ್ನು ಸಾವಧಾನ ಚಿತ್ತದಿಂದ ಶ್ರವಣ ಮಾಡುವಂಥವರಾಗಿರಿ. ಅದರಿಂದ ಸಾಧಕರಿಗೆ ಮನಸ್ಸು ನಿರ್ವಿಷಯವಾಗಿ, ಚಿತ್ತಕ್ಕೆ ಸಮಾಧಾನವಾಗುವುದು. ಬೆನಕಪ್ಪನೇ ಅಜ್ಞಾನಿಯಾದ ಜೀವನು.ಆತನಿಗೆ ಹೃದ್ಗ್ರಂಥಿ ಎಂಬ ಗ್ರಂಥಿರೋಗವು ಬಂದಾಗ, ಆತನ ಸ್ತ್ರೀಯಾದ ಬುದ್ಧಿಯು ಭಯಪಟ್ಟು, ಸದ್ಗುರುವಿಗೆ ಶರಣು ಹೋಗುತ್ತಾಳೆ. ಅನ್ನುತ್ತಾಳೆ - “ಯಾವತನಿಗೆ ಹೃದ್ಗ್ರಂಥಿ ರೋಗ ಇರುವದೋ ಆತನಿಗೆ ಸತ್ಸಂಗದೊಳಗಿಂದ ಹೊರಗೆ ಕಳುಹಿಸುತ್ತಾರೆ. ಸತ್ಸಂಗ ತಪ್ಪಿತೆಂದರೆ ನಮಗೆ ಮರಣವೇ ಪ್ರಾಪ್ತವಾಗಿರುವುದು”. ಆಗ್ಗೆ ಸದ್ಗುರುವು ಬುದ್ಧಿಗೆ ಅಭಯವನ್ನು ಕೊಟ್ಟು, ನಾಮಸ್ಮರಣೆ ಮಾಡಲಿಕ್ಕೆ ಹೇಳುವಂಥವನಾದನು. ನಾಮಸ್ಮರಣೆ ಯೋಗದಿಂದ ಹೃದ್ಗ್ರಂಥಿಯು ನಾಶವಾಯಿತು, ಮತ್ತು ಸತ್ಸಂಗವೂ ತಪ್ಪಲಿಲ್ಲ. ಜೀವನು ಸುಕ್ಷೇಮನಾದರೂ,

ಬದ್ಧಿಗೆ ಒಮ್ಮೆ ಆ ರೋಗವು ಪ್ರಾಪ್ತವಾಯಿತು. ಆದರೆ ಸತ್ಸಂಗದಿಂದ ಬುದ್ಧಿಯು ನಿರ್ಮಲವಾಗಿ, ರೋಗವು ಶೀಘ್ರವಾಗಿ ಶಾಂತವಾಯಿತು. ಇರಲಿ, ಜೀವಪ್ಪನೇ ಜೀವನು ಭವರೋಗದಿಂದ ಜ್ಞಾನ ಚಕ್ಷುಗಳು ಹೋಗಿ ಕುರುಡನಾದವನು. ಆದರೆ ಸದ್ಗುರುರಾಯನಿಗೆ ಶರಣು ಹೋದ ಮಾತ್ರದಿಂದ ಆತನು ಜೀವನಿಗೆ ನಿರ್ಮಲವಾದ ಜ್ಞಾನ ಚಕ್ಷುಗಳನ್ನು ಪುನಃ ಪ್ರಾಪ್ತಿ ಮಾಡಿಕೊಟ್ಟನು. ಈ ರೀತಿಯಲ್ಲಿ, ಆ ಯಾವ ಅಜ ಅಜಿತನು, ಶಬ್ದಾತೀತನು, ನಿಷ್ಕ್ರಿಯ ಮತ್ತು ಗುಣಾತೀತನಾದವನು ಇರುವನೋ ಆತನೇ ಈ ನಾಮ ರೂಪಗಳಲ್ಲಿ ಕ್ರೀಡಿಸುತ್ತಾನೆ. ಅದ್ವಯನಾಗಿ ಸರ್ವತ್ರದಲ್ಲಿ ಯೂ ಇದ್ದು, ಏನೇನು ನೋಡುವನೋ ಅದನ್ನು ಪವಿತ್ರ ಮಾಡುತ್ತ, ಸಗುಣ ರೂಪದಿಂದ ಕಾಣಿಸಿಕೊಳ್ಳುತ್ತ, ಆ ಸದ್ಗುರುವು ತನ್ನಲ್ಲೇ ತಾನು ಕ್ರಿಡಿಸುತ್ತಿರುವನು. ತಾನೇ ದೇವನು, ತಾನೇ ಭಕ್ತನು, ತನ್ನ ಸಂಕಟದಲ್ಲಿ ತಾನೇ ರಕ್ಷಿಸುವವನು. ತನ್ನ ಮೇಲೆ ತಾನೇ ದಯಾ ಮಾಡುತ್ತಿರುವನು, ಮತ್ತು ತನ್ನನ್ನು ತಾನೇ ತಾರಿಸುವನು. ಇಂಥಾ ಅಚಿಂತ್ಯನಾದ ಸದ್ಗುರುವು ನನಗೆ

ಆಜ್ಞೆಯನ್ನು ಕೊಟ್ಟನು, ಮತ್ತು ಗ್ರಂಥ ರಚಿಸುವದಕ್ಕೆ ಪ್ರಜ್ಞೆಯನ್ನು ಕೊಟ್ಟಿರುವನು. ಆದ್ದರಿಂದಲೇ ಈ ಗ್ರಂಥವು ರಚಿಸಲ್ಪಟ್ಟಿದ್ದು. ಆತನು ತಾನೇ ರಚಿಸಿ, ಸುಮ್ಮನೇ ಅಜ್ಞನಾದ ನನ್ನನ್ನು ಮುಂದಕ್ಕೆ ಮಾಡಿರುತ್ತಾನೆ. ಆ ಸಮರ್ಥ ಸರ್ವಜ್ಞನಾದಂಥವನ ಹೊರತು ಮತ್ತ್ಯಾರಿಗೆ ಇದು ಸಾಧ್ಯವಾದೀತು ? ಹೇ ಶ್ರೋತಾ ಜನರುಗಳಿರಾ, ಮುಂದಿನ ಅಧ್ಯಾಯದಲ್ಲಿ ಸುರಸಕಥನವನ್ನು ಕೇಳುವಂಥವರಾಗಿರಿ. ಆದರಿಂದ ಕಠಿಣವಾದ ತ್ರಿತಾಪಗಳು ನಾಶವಾಗಿ ಚಿತ್ರಕ್ಕೆ ಸಮಾಧಾನವಾಗುವದು. ಎಂಬಲ್ಲಿ ಶ್ರೀ ಸಿದ್ಧಾರೂಢ ಕಥಾಮೃತದೊಳ್ ಶ್ರವಣ ಮಾತ್ರದಿಂದ ಸರ್ವ ಪಾಪಗಳನ್ನು ಭಸ್ಮ ಮಾಡುವಂಥ ಅತಿ ಮಧುರವಾದ ಈ ಹತ್ತೊಂಬತ್ತನೇ ಅಧ್ಯಾಯವನ್ನು ಶಿವದಾಸನು ಸಿದ್ಧಾರೂಢ ಸದ್ಗುರುಗಳು ಚರಣಾರವಿಂದಗಳಲ್ಲಿ ಅರ್ಪಿಸಿರುವನು.